**ಅಸಲು ದಾವಾ ನಂಃ 53/2016**
**ಪಿ.ಡಬ್ಲ್ಯೂ: 02**

**ದಿನಾಂಕಃ 27-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎಸ್ ವಿ ಸ ಪ್ರತಿವಾದಿ ಪರ ವಕೀಲರಿಂದ**

ನಾನು ಬಿ ಎ ಪದವಿಯನ್ನು ವ್ಯಾಸಂಗ ಮಾಡಿರುತ್ತೇನೆ. ನನ್ನ ಸ್ವಂತ ಊರು ಪರಶುರಾಂಪುರ ಆಗಿರುತ್ತದೆ. ಪತ್ರ ಬರೆಯಲು ಲೈಸನ್ಸ್ ಇರುತ್ತದೆ. ಸದರಿ ಪರವಾನಿಗೆಯ ನಂ.60/11-12. ಸದರಿ ಪರವಾನಿಗೆಯ ಅವಧಿ ಕೇವಲ 3 ವರ್ಷ ಎಂದರೆ ಸಾಕ್ಷಿಯು ಪ್ರತಿವರ್ಷ ಪರವಾನಿಗೆಯನ್ನು ನವೀಕರಣ ಗೊಳಿಸುತ್ತೇನೆ.

2. ಬೊಮ್ಮಯ್ಯ ಬಿನ್ ಪಾಲಯ್ಯ ರವರು 1 ನೇ ಪ್ರತಿವಾದಿಗೆ ಸಂಬಂಧದಲ್ಲಿ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. 2003-04 ರಿಂದ ಬೊಮ್ಮಯ್ಯರವರು ನನಗೆ ಗೊತ್ತಿರುತ್ತಾರೆ. 1 ನೇ ವಾದಿಯು ಬೊಮ್ಮಯ್ಯನಿಗೆ ಸಂಬಂಧದಲ್ಲಿ ಏನಾಗುತ್ತಾರೆ ಅಂತ ನನಗೆ ಗೊತ್ತಿಲ್ಲ. 1 ನೇ ವಾದಿಯ ತಾಯಿ ಸರೋಜಮ್ಮ ರವರು ನನಗೆ ಗೊತ್ತಿಲ್ಲ.

3. ಸಾಮಾನ್ಯವಾಗಿ ಪತ್ರವನ್ನು ಬರೆಯುವಾಗ ಪತ್ರವನ್ನು ಬರೆಸುವವರು ಮತ್ತು ಬರೆದುಕೊಡುವವರು ಮತ್ತು ಸಾಕ್ಷಿದಾರರಾಗಿ ಉಭಯ ಪಕ್ಷಗಾರರನ್ನು ಗುರುತಿಸುವವರು ಇರುತ್ತಾರೆ ಎಂದರೆ ಸರಿ. ನಿಪಿಃ7 ಕ್ಕೆ ನಾನು ಸಾಕ್ಷಿದಾರನಲ್ಲ ಎಂದರೆ ಸರಿಯಲ್ಲ. ನಿಪಿಃ7 ರಲ್ಲಿ ಸಾಕ್ಷಿದಾರರ ಸಹಿಯ ಭಾಗವನ್ನು ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ತೋರಿಸಿದಾಗ ಸದರಿ ಸಾಕ್ಷಿದಾರರ ಸಹಿ ಭಾಗದಲ್ಲಿ ಸಾಕ್ಷಿಯ ಸಹಿ ಇರುವುದೇ ಎಂದು ಪ್ರಶ್ನಿಸಲಾಗಿ ಸದರಿ ನಿಪಿಃ7 ನ್ನು ಸಾಕ್ಷಿಯು ಪರಿಶೀಲಿಸಿ ನಾನು Indentification ಕಾಲಂದಲ್ಲಿ ಪಿ ಶಶಿಧರಪ್ಪ ಎಂದು ಸಹಿ ಮಾಡಿರುತ್ತೇನೆ. ಆದರೆ ನನ್ನ ಹೆಸರು ಸಾಕ್ಷಿಗಳ ಭಾಗದಲ್ಲಿ ಇರುವುದಿಲ್ಲ.

4. ನಾನು ಪಕ್ಷಗಾರರನ್ನು ಗುರುತಿಸಿದ ಸಾಕ್ಷಿಯಾಗಿರುತ್ತೇನೆ. ಮತ್ತು ಸದರಿ ಗುರುತಿಸುವಿಕೆಯ ವಿಚಾರವಾಗಿ ನಿಪಿಃ7 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನನಗೆ ಬೊಮ್ಮಯ್ಯ ಮತ್ತು ವಿರೇಶ ಎಂಬುವವರು ಗೊತ್ತಿಲ್ಲ ಎಂದರೆ ಸರಿಯಲ್ಲ. ಬೊಮ್ಮಯ್ಯರವರಿಗೆ 2003-04 ರಲ್ಲಿ ಅಂದಾಜು 84-85 ವರ್ಷ ವಯಸ್ಸಾಗಿತ್ತು.

5. ಕೆಂಚಮ್ಮ ಎಂದು ನಿಪಿಃ7 ಕ್ಕೆ ಸಾಕ್ಷಿದಾರರ ಕಾಲಂನಲ್ಲಿ ಸಹಿ ಮಾಡಿರುತ್ತಾರೆ. ಸದರಿ ಕೆಂಚಮ್ಮರವರು ಬೊಮ್ಮಯ್ಯ ರವರಿಗೆ ಹೆಂಡತಿಯಾಗಬೇಕು. ಸದರಿ ಕೆಂಚಮ್ಮರವರು ಪ್ರಸ್ತುತವಾಗಿ ಜೀವಂತ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಬೊಮ್ಮಣ್ಣ ರವರು 2003-04 ರಲ್ಲಿ

ಅನಾರೋಗ್ಯದಿಂದ ಬಳಲುತ್ತಿದ್ದರು ಮತ್ತು ಸದರಿಯವರಿಗೆ ಪ್ಯಾರ್ಶ ವಾಯು ಖಾಯಿಲೆ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಬೊಮ್ಮಯ್ಯರವರು ಆರೋಗ್ಯವಂತರಾಗಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಬೊಮ್ಮಯ್ಯ ರವರು ಪ್ಯಾರ್ಶ ವಾಯು ಖಾಯಿಲೆಯಿಂದ ಬಳಲುತ್ತಿದ್ದರು ಮತ್ತು ಸದರಿಯವರಿಗೆ ಜ್ಞಾನದ ಮೇಲೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ.

6. ಬೊಮ್ಮಯ್ಯ ರವರು ವಿರೇಶರವರಿಗೆ ಮರಣಶಾಸನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಬೊಮ್ಮಯ್ಯ ರವರಿಗೆ ಮತ್ತು ವಿರೇಶರವರಿಗೆ ಏನು ಸಂಬಂಧ ಅಂತ ಗೊತ್ತಿಲ್ಲ. ನಿಪಿಃ7 ನ್ನು ನಾನು ಸೃಷ್ಟಿಸಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬೊಮ್ಮಯ್ಯ ರವರಿಗೆ ಮತ್ತು ವಿರೇಶರವರಿಗೆ ಏನು ಸಂಬಂಧ ಇರುವುದಿಲ್ಲ ಮತ್ತು ಸದರಿ ಬೊಮ್ಮಯ್ಯರವರು ನಾಯಕ ಜನಾಂಗಕ್ಕೆ ಸೇರಿದವರಾಗಿದ್ದರಿಂದ ಮತ್ತು ವಿರೇಶರವರು ಲಿಂಗಾಯತ ಜನಾಂಗಕ್ಕೆ ಸೇರಿದವರಾಗಿದ್ದರಿಂದ ಸದರಿ ಬೊಮ್ಮಯ್ಯರವರು ಯಾವುದೇ ಮರಣಶಾಸನವನ್ನು ವಿರೇಶರವರಿಗೆ ಬರೆದುಕೊಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಿರೇಶರವರು ಸದರಿ ಸುಳ್ಳು ಮರಣಶಾಸನ ಪತ್ರವನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.